ದಿನಾಂಕ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಜೆ ರವರಿಂದಃ-**

ನಾನು ಪರದಂಡ ಕುಟುಂಬಕ್ಕೆ ಸೇರಿದವನು. ನನ್ನ ಅಜ್ಜನ ಹೆಸರು ಮೊಣ್ಣಪ್ಪ. ನನ್ನ ತಂದೆ ತಾಯಿಗೆ ಇಬ್ಬರು ಗಂಡು ಹಾಗೂ ಒಬ್ಬರು ಹೆಣ್ಣು ಮಗು. ವಾದಿ ನನ್ನ ತಂಗಿ. ದಾವಾ ಎ ಅನುಸೂಚಿ ಸ್ವತ್ತುಗಳು ನನ್ನ ತಂದೆಗೆ ಪೌತಿ ವಾರಸು ಮೂಲಕ ಬಂದಿರುತ್ತವೆ. ದಾವಾ ಬಿ ಅನುಸೂಚಿ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು. ನನ್ನ ತಂದೆ ಉದ್ಯೋಗದಲ್ಲಿ ಇರಲಿಲ್ಲ. ದಾವಾ ಬಿ ಅನುಸೂಚಿ ಸ್ವತ್ತುಗಳನ್ನು ನನ್ನ ತಂದೆಯು 4ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ನಾನು ಜಿ.ಪಿ.ಎ ಹೋಲ್ಡರ್ ಆಗಿ ಸಹಿ ಮಾಡಿರುತ್ತೇನೆ.

ನಾನು ಕೃಷಿಕನಾಗಿದ್ದು, ಬೇರೆ ಯಾವುದೇ ಉದ್ಯೋಗ ಮಾಡುತ್ತಿಲ್ಲ. ದಾವಾ ಎ ಅನುಸೂಚಿ ಸ್ವತ್ತುಗಳಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ. ಅದರಿಂದ ಬರುವ ಆದಾಯವನ್ನು ನಾನು ಮತ್ತು ನನ್ನ ತಾಯಿ ಪಡೆದುಕೊಳ್ಳುತ್ತಿದ್ದೇವೆ. ಕುಟುಂಬದ ಸ್ವತ್ತುಗಳಿಂದ ವಾರ್ಷಿಕ 100 ಬ್ಯಾಗ್ ಕಾಫಿ ಫಸಲು ಸಿಗುತ್ತದೆ. ಅಂದಾಜು ವಾರ್ಷಿಕ 800 ಬ್ಯಾಗ್ ಕಾಫಿ ಫಸಲನ್ನು ನಾನು ಪಡೆಯುತ್ತೇನೆ ಎಂದರೆ ಸರಿಯಲ್ಲ. ವಾರ್ಷಿಕ 10-20 ಕ್ವಿಂಟಾಲ್ ಮೆಣಸನ್ನು ಬೆಳೆಯುತ್ತೇನೆ ಎಂದರೆ ಸರಿಯಲ್ಲ. ಗದ್ದೆ ಜಮೀನು ಇದ್ದು, ಭತ್ತ ಬೆಳೆಯುತ್ತಿಲ್ಲ. ನಾನು ಭತ್ತ ಬೆಳೆಯುತ್ತಿದ್ದು, ಅದರಿಂದ ವಾರ್ಷಿಕ ರೂ. 15,000/- ಆದಾಯ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ದಾವಾಸ್ವತ್ತುಗಳಲ್ಲಿ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನನ್ನ ತಂದೆಯು ವಾದಿಗೆ ನನ್ನ ಸಮಕ್ಷಮ ರೂ. 30-40 ಲಕ್ಷ ಹಣವನ್ನು ನೀಡಿರುತ್ತಾರೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ವಾದಿಗೆ ಭಾಗ ನೀಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-1 ದಾಖಲೆಯನ್ನು ದಾವೆಯನ್ನು ದಾಖಲಿಸಿದ ಬಳಿಕ ಪಡೆದುಕೊಂಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.